ಪ್ರಜಾವಾಣಿ

## ಎನ್‌ಬಿಎ ಕಾಲೇಜ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

# ಬೆಂಗಳೂರಿನ ತಂಡಗಳ ಪಾರಮ್ಯ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಜೈನ್ ವಿವಿ, ಮೌಂಟ್ಸ್ ಕ್ಲಬ್ ಮತ್ತು ಸುರಾನಾ ಕಾಲೇಜು ತಂಡಗಳು ಮುಂಬೈನಲ್ಲಿ ನಡೆದ ಎನ್‌ಬಿಎ ಜಾಮ್ 3x3 ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಚಾಂಪಿಯನ್ ಆದವು.

ಪುರುಷರ ವಿಭಾಗದ ಫೈನಲ್‌ನಲ್ಲಿ ಬೆಂಗಳೂರಿನ ಜೈನ್ ವಿವಿ ತಂಡ 21–19 ರಲ್ಲಿ ದೆಹಲಿಯ ಭಾರತಿ ವಿವಿ ತಂಡವನ್ನು ಮಣಿಸಿತು. ಮೊಹಮ್ಮದ್ ಕೈಫ್ (12) ಮತ್ತು ಯಶಸ್ (4) ಜೈನ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮೌಂಟ್ಸ್ ಕ್ಲಬ್ 15–5 ರಲ್ಲಿ ಹೈದರಾಬಾದ್‌ನ ಲೊಯೋಲಾ ಅಕಾಡೆಮಿ ವಿರುದ್ಧ ಸುಲಭ ಗೆಲುವು ಪಡೆಯಿತು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಸುರಾನಾ ಕಾಲೇಜು ತಂಡ 13–11 ರಲ್ಲಿ ಅಲೀಗಢ ಮುಸ್ಲಿಮ್ ವಿವಿ ತಂಡವನ್ನು ಸೋಲಿಸಿತು. ಆದರೆ ಬಾಲಕಿಯರ ವಿಭಾಗದಲ್ಲಿ ಮಾತ್ರ ಬೆಂಗಳೂರಿನ ತಂಡಕ್ಕೆ ಪ್ರಶಸ್ತಿ ದೊರೆಯಲಿಲ್ಲ. ಬೆಂಗಳೂರು ಆಲ್‌ಸ್ಟಾರ್ಸ್ ತಂಡ ಫೈನಲ್‌ನಲ್ಲಿ 5–9 ರಲ್ಲಿ ಪುಣೆ ಟೈಗರ್ಸ್ ಎದುರು ಸೋಲು ಅನುಭವಿಸಿತು.



ಮುಂಬೈನಲ್ಲಿ ನಡೆದ ಎನ್‌ಬಿಎ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡ. (ಎಡದಿಂದ) ಹೃಷಿಕೇಶ್, ಪಿ. ವಿಶು, ಪುನೀತ್, ಡಾ. ಯು.ವಿ. ಶಂಕರ್ (ನಿರ್ದೇಶಕರು, ಕ್ರೀಡೆ), ಯಶಸ್ ಮತ್ತು ಮೊಹಮ್ಮದ್ ಕೈಫ್